ನಿಮ್ಮೊಡನೆ

# ‘ಡಾಕ್ಟರ್’ಗಳಿದ್ದಾರೆ ಎಚ್ಚರಿಕೆ

**ಹೆಸರಿನ ಹಿಂದೊಂದು ‘ಡಾ’ ಎನ್ನುವ ವಿಶೇಷಣವನ್ನು ಅಂಟಿಸಿಕೊಳ್ಳುವ ಮೂಲಕ ಸಮಾಜದಲ್ಲಿ ವರ್ಚಸ್ಸು ಹೆಚ್ಚಿಸಿಕೊಳ್ಳುವ ಆಸೆ ಅನೇಕರಿಗಿರುತ್ತದೆ. ಪಿಎಚ್.ಡಿ. ಪಡೆಯುವುದು ಶ್ರಮದಾಯಕ ಮಾರ್ಗವಾದುದರಿಂದ, ಗೌರವ ಡಾಕ್ಟರೇಟ್‌ಗಳ ಬಲೆಗೆ ಬೀಳುವವರ ಸಂಖ್ಯೆ ಹೆಚ್ಚುತ್ತಿದೆ. ಜನರ ಕೀರ್ತಿಯ ಮೋಹವೇ ನಕಲಿ ಡಾಕ್ಟರೇಟ್‌ಗಳ ದಂಧೆಗೆ ಮುಖ್ಯ ಕಾರಣ.**



ಈಶ್ವರ್

ತಮ್ಮ ಹೆಸರಿಗಿಂತಲೂ ಹೆಸರಿನ ಹಿಂದಿನ ವಿಶೇಷಣದ ಬಗ್ಗೆ ಹೆಚ್ಚಿನ ಮೋಹ ನಮ್ಮ ಜನಕ್ಕಿದೆ ಎನ್ನುವುದಕ್ಕೆ ಹೊಸ ಉದಾಹರಣೆ, ಮಂಡ್ಯ ಜಿಲ್ಲೆಯಲ್ಲಿ 350ಕ್ಕೂ ಹೆಚ್ಚು ಮಂದಿಗೆ ಒಂದು ವರ್ಷದ ಅವಧಿಯಲ್ಲಿ ಗೌರವ ಡಾಕ್ಟರೇಟ್ ದೊರೆತಿರುವುದು. ಈವರೆಗೆ ಗೌರವ ಡಾಕ್ಟರೇಟ್ ಪದವಿಯೆನ್ನುವುದು ವ್ಯಕ್ತಿತ್ವಕ್ಕೆ–ಸಾಧನೆಗೆ ದೊರೆಯುವ ಮನ್ನಣೆ ಎಂದಾಗಿತ್ತು. ಆದರೆ ಈಗಿನ ಪದವಿಗಳಿಗೆ ಮಾರುಕಟ್ಟೆಯ ಮೌಲ್ಯ ದೊರೆತಿದ್ದು, ಡಾಕ್ಟರೇಟ್‌ಗಳನ್ನು ಬಿಕರಿ ಮಾಡುವ ಪೇಟೆಯೊಂದು ರೂಪುಗೊಂಡಿದೆ. ಮಂಡ್ಯ ಜಿಲ್ಲೆಯ ಉದಾಹರಣೆ ನೋಡುವುದಾದರೆ, ಡಾಕ್ಟರೇಟ್ ಪ್ರಮಾಣಪತ್ರ ಪಡೆದವರು ₹ 30 ಸಾವಿರದಿಂದ ₹ 1 ಲಕ್ಷ ರೂಪಾಯಿವರೆಗೆ ತಮ್ಮ ಶಕ್ತ್ಯಾನುಸಾರ ಹಣ ತೆತ್ತು ‘ಟೋಪಿ’ ಹಾಕಿಸಿಕೊಂಡಿದ್ದಾರೆ. ತಮಿಳುನಾಡು ಮೂಲದ ಖಾಸಗಿ ವಿಶ್ವವಿದ್ಯಾಲಯ ಸೃಷ್ಟಿಸಿರುವ ಈ ‘ಗೌರವ ಡಾಕ್ಟರೇಟ್’ ಸಮೂಹದಲ್ಲಿ ರಾಜಕಾರಣಿಗಳು, ಶಿಕ್ಷಕರು, ಪತ್ರಕರ್ತರು, ಗಣಿಧಣಿಗಳು, ಪೆಟ್ರೋಲ್ ಬಂಕ್ ಮಾಲೀಕರು, ಕಲಾವಿದರು ಸೇರಿದಂತೆ ಸಮಾಜದ ಎಲ್ಲ ವರ್ಗದ ಪ್ರಜ್ಞಾವಂತರು ಇರುವುದು ಗಮನಾರ್ಹ. ಈ ಪದವಿಗಳನ್ನು ಹಂಚಲಿಕ್ಕಾಗಿಯೇ ತಾಲ್ಲೂಕು ಮಟ್ಟದಲ್ಲಿ ಏಜೆಂಟರನ್ನು ವಿಶ್ವವಿದ್ಯಾಲಯ ನೇಮಿಸಿಕೊಂಡಿದ್ದು – ಬೆಂಗಳೂರು, ಪುದುಚೇರಿ, ಪಣಜಿಗಳಲ್ಲಿ ವರ್ಣರಂಜಿತ ಪ್ರಶಸ್ತಿಪ್ರದಾನ ಕಾರ್ಯಕ್ರಮಗಳು ನಡೆದಿವೆ.

ಗೌರವ ಡಾಕ್ಟರೇಟ್‌ಗಳನ್ನು ವಿತರಿಸುವ ದಂಧೆ ಇಂದಿನದೇನೂ ಅಲ್ಲ. ಈ ಮೊದಲು ವಿದೇಶಿ ವಿಶ್ವವಿದ್ಯಾಲಯಗಳು ಮಾಡುತ್ತಿದ್ದ ದಂಧೆ ಈಗ ದೇಸೀಕರಣಗೊಂಡಿದೆಯಷ್ಟೇ. ಅಮೆರಿಕ, ಇಂಗ್ಲೆಂಡ್, ಇಟಲಿ, ಜರ್ಮನಿಯಂಥ ದೇಶಗಳ ವಿಶ್ವವಿದ್ಯಾಲಯದಿಂದ ನಮಗೆ ಗೌರವ ಡಾಕ್ಟರೇಟ್ ದೊರೆತಿದೆ ಎಂದು ಹೇಳಿಕೊಳ್ಳುವವರು ಹಾಗೂ ವಿದೇಶಗಳಲ್ಲಿ ಪೌರಸನ್ಮಾನ ಮಾಡಿಸಿಕೊಂಡವರು ಚಿತ್ರರಂಗದಲ್ಲಿ ಸಾಕಷ್ಟು ಮಂದಿ ದೊರೆಯುತ್ತಾರೆ. ವಿಪರ್ಯಾಸವೆಂದರೆ, ಈ ಪುರಸ್ಕೃತರ ಸಾಧನೆ ಏನೆಂಬುದು ಬಹುತೇಕ ಸಂದರ್ಭಗಳಲ್ಲಿ ಸ್ಥಳೀಯರಿಗೇ ತಿಳಿದಿರುವುದಿಲ್ಲ. ₹ 1.75 ಲಕ್ಷ ನೀಡಿದರೆ ಡಾಕ್ಟರೇಟ್ ಪದವಿ ನೀಡುವುದಾಗಿ ಯುನೈಟೆಡ್ ಕಿಂಗ್‌ಡಮ್‌ನ ವಿ.ವಿ.ಯ ಹೆಸರಿನಲ್ಲಿ ತಮಗೆ ಪತ್ರವೊಂದು ಬಂದಿದೆ ಎಂದು ಶಾಸಕ ಸುರೇಶ್ ಕುಮಾರ್ ಎರಡು ವರ್ಷಗಳ ಹಿಂದೆ ಪೊಲೀಸರಿಗೆ ದೂರು ಕೊಟ್ಟಿದ್ದು ಸುದ್ದಿಯಾಗಿತ್ತು. ಆ ಪ್ರಕರಣದಲ್ಲಿ ಪತ್ರ ಬರೆದ ವ್ಯಕ್ತಿಯ ಬಂಧನವೂ ನಡೆದಿತ್ತು. ಆದರೆ, ಇಂಥ ಬಹುತೇಕ ಪ್ರಕರಣಗಳು ಬೆಳಕಿಗೆ ಬರುವುದಿಲ್ಲ. ಡಾಕ್ಟರೇಟ್ ಆಕರ್ಷಣೆಗೆ ಒಳಗಾಗಿ ದುಡ್ಡು ಕೊಟ್ಟವರಿಗೆ ತಾವು ವಂಚನೆಗೆ ಒಳಗಾಗಿರುವುದು ತಿಳಿದರೂ ಅದನ್ನು ಯಾರಿಗೂ ಹೇಳಿಕೊಳ್ಳುವುದಿಲ್ಲ. ದೂರು ಇಲ್ಲದ ಕಾರಣಕ್ಕಾಗಿ ಪೊಲೀಸ್ ವಿಚಾರಣೆ ಕೂಡ ನಡೆಯುವುದಿಲ್ಲ. ಕೆಲವು ಭಂಡರಂತೂ ಎಗ್ಗಿಲ್ಲದೆ ತಮ್ಮ ಹೆಸರಿನೊಂದಿಗೆ ಡಾಕ್ಟರೇಟ್ ವಿಶೇಷಣವನ್ನೂ ಬರೆದುಕೊಳ್ಳುವುದಿದೆ.

ಜನರ ಕೀರ್ತಿಯ ಮೋಹವೇ ನಕಲಿ ಡಾಕ್ಟರೇಟ್‌ಗಳ ದಂಧೆಗೆ ಮುಖ್ಯ ಕಾರಣ. ತಮ್ಮ ಹೆಸರಿನ ಹಿಂದೆ ‘ಡಾ’ ಎನ್ನುವ ವಿಶೇಷಣವನ್ನು ಅಂಟಿಸಿಕೊಳ್ಳುವ, ಆ ಮೂಲಕ ಸಮಾಜದಲ್ಲಿ ತಮ್ಮ ವರ್ಚಸ್ಸು–ವ್ಯಾಪಾರ ಹೆಚ್ಚಿಸಿಕೊಳ್ಳುವ ಆಸೆ ಅನೇಕರಿಗಿರುತ್ತದೆ. ಪಿಎಚ್.ಡಿ. ಪಡೆಯುವುದು ಶ್ರಮದಾಯಕ ಮಾರ್ಗವಾದುದರಿಂದ, ಇಂಥ ಗೌರವ ಡಾಕ್ಟರೇಟ್‌ಗಳ ಬಲೆಗೆ ಬೀಳುತ್ತಾರೆ. ತಮ್ಮನ್ನು ಸಂಪರ್ಕಿಸುತ್ತಿರುವ ವಿ.ವಿ. ಅಸ್ತಿತ್ವದಲ್ಲಿದೆಯೇ ಎಂದು ಪರಿಶೀಲಿಸುವ ಗೋಜಿಗೂ ಕೆಲವರು ಹೋಗುವುದಿಲ್ಲ. ವಾಸ್ತವವಾಗಿ ಅನೇಕ ವಿ.ವಿ.ಗಳ ಅಸ್ತಿತ್ವ ನಕಲಿ ಪ್ರಮಾಣಪತ್ರಗಳ ವಿತರಣೆಯಷ್ಟೇ ಆಗಿರುತ್ತದೆ. ಈ ನಕಲಿಸಂಸ್ಥೆಗಳು ಸಾಹಿತ್ಯದ ಸಖ್ಯವೇ ಇಲ್ಲದವರಿಗೆ ಸಾಹಿತ್ಯಸಾಧನೆಗಾಗಿ ಗೌರವ ಡಾಕ್ಟರೇಟ್ ನೀಡುತ್ತವೆ; ಹತ್ತನೇ ತರಗತಿ ಅನುತ್ತೀರ್ಣರಾದವರಿಗೆ ಶಿಕ್ಷಣ ಕ್ಷೇತ್ರದಲ್ಲಿನ ಸಾಧನೆಗೆ ಪ್ರಶಸ್ತಿ ನೀಡುತ್ತವೆ. ಇಂಥ ದಿಢೀರ್ ಸಾಧಕರಿಂದಾಗಿ ಶ್ರಮಪಟ್ಟು ಪಿಎಚ್.ಡಿ. ಪಡೆದವರೂ ತಮ್ಮ ಡಾಕ್ಟರೇಟ್ ಬಗ್ಗೆ ಹೇಳಿಕೊಳ್ಳಲು ಹಿಂಜರಿಯುವಂತಾಗಿದೆ.

‘ಡಾಕ್ಟರೇಟ್’ ಎನ್ನುವುದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ನಡೆಸುವ ಅಧ್ಯಯನ ಹಾಗೂ ಅದಕ್ಕೆ ಸಂಬಂಧಿಸಿದ ಪ್ರೌಢ ಪ್ರಬಂಧಕ್ಕೆ ವಿ.ವಿ. ನೀಡುವ ಶೈಕ್ಷಣಿಕ ಮನ್ನಣೆಯಾಗಿರುತ್ತದೆ. ಶೈಕ್ಷಣಿಕ ಚೌಕಟ್ಟಿನಾಚೆಗೆ ಆ ಪದವಿಗೆ ಯಾವ ಮನ್ನಣೆಯೂ ಇರುವುದಿಲ್ಲ. ವೈದ್ಯಕೀಯ ಪದವಿ ಹೊಂದಿರುವವರು ಮಾತ್ರ ತಮ್ಮ ಹೆಸರಿನ ಜೊತೆಗೆ ‘ಡಾ.’ ವಿಶೇಷಣ ಬಳಸಬೇಕು ಎಂದು ಕಾನೂನು ಕೂಡ ಹೇಳುತ್ತದೆ. ಆದರೂ, ಪಿಎಚ್.ಡಿ. ಪಡೆದ ಬಹುತೇಕರು ತಮ್ಮ ಹೆಸರಿನ ಜೊತೆಗೆ ‘ಡಾ.’ ವಿಶೇಷಣ ಬಳಸುವ ತಪ್ಪು ಮಾಡುತ್ತಾರೆ. ಹೆಸರಿನ ಜೊತೆಗೆ ಡಾಕ್ಟರೇಟ್ ತಗುಲಿಸಿಕೊಳ್ಳುವುದರಿಂದ ನಮ್ಮ ವ್ಯಕ್ತಿತ್ವದ ತೂಕದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ ಎನ್ನುವ ಅರಿವು ಶೈಕ್ಷಣಿಕ ವರ್ಗಕ್ಕೇ ಹೆಚ್ಚು ಅಗತ್ಯವಾಗಿದೆ. ನಕಲಿ ಡಾಕ್ಟರ್‌ಗಳಿಂದ ಸಮಾಜವನ್ನು ರಕ್ಷಿಸುವ ಕೆಲಸವನ್ನು ವಿಶ್ವವಿದ್ಯಾಲಯಗಳೂ ಸರ್ಕಾರವೂ ಮಾಡಬೇಕಾಗಿದೆ.

■ ರಘುನಾಥ ಚ.ಹ.